KARNATAKA PRESERVATION OF TREES BILL, 1976.

Motion to Consider

SRI C. N. PATIL (Minister for Forest).—Sir, I beg to move :

' That the Karnataka Preservation of Trees Bill, 1976, be taken into consideration."

MR. DEPUTY SPEAKER.—Motion moved :

"That the Karnataka Preservation of Trees Bill, 1976, be taken into consideration."

SRI KAGODU THIMMAPPA.—Sir, this is an important Bill. It was introduced only yesterday and it is rather difficult to take it up today since we have not had sufficient time to study it. They seem to have evoved a new theory on forest,

MR. DEPUTY SPEAKER.—The Hon'ble Member could have stated this earlier The Hon'ble Minister has already moved the consideration motion. It is before the House. Besides, tomorrow is the last day and the Bill has to be passed, and it has to go to the Council.

SRI H. T. KRISHNAPPA.—Is the Hon'ble Minister particular that this Bill should be taken up in this session itself?

SRI C. N. PATIL.—We can take this up in the next session. I have no objection.

MR. DEPUTY SPEAKER —Then we shall take up the consideration of the Karnataka (Sandur Area) Inams Abolition Bill 1976. Thank the Hon'ble Minister has to reply now.

Karnataka (Sandur Area) Inams Abolition Bill, 1976, as reported by the Joint Select Committee

Motion to Consider (Debate Continued)

SRI N. HUTCHMASTHI GOWDA.—I beg to move :

That the Karnataka (Sandur Area) Inams Abolition Bill, 1976, as reported by Joint Select Committee be taken into consideration.

MR. DEPUTY SPEAKER —Motion moved :

That the Karanaka (Sandur Area) Inams Abolition Bill, 1976, as reported by Joint Select Committee be taken into consideration.

5-30 P. M.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಮಸೂದೆ ಹಿಂದೆ ಜಾಗರೇ ಸಭೆಯಲ್ಲಿ ಚರ್ಚೆಯಾಗಿ ಇದನ್ನು ಜಂಟಿ ಪರಿಶೀಲನಾ ಸಮಿತಿ ಕೆಲವು ಮುಖ್ಯ ಅಂಶಗಳನ್ನು ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಟ್ಟ ಆಧಾರದ ಮೇಲೆ ಇದು ಸಭೆಯ ಮುಂದೆ ಬಂದಿದೆ. ಇದರಲ್ಲಿ

ರತಕ್ಕ ಮಂಖ್ಯೆ ಅಂಶಗಳು ಮೂರು ನಾಲ್ಕು ಮಾತ್ರ, ಒಂದನೆ...ದು ಆಕ್ಯುಪೆನ್ಸ್ ಅರ್ಜಿ ಹಾಕಿಕೊಳ್ಳುವುದಕ್ಕೆ ಯಾವ ತಾರೀಖಿನಿಂದ ಅವಕಾಶ ಇದೆ ಎಂದು. ಅದು 1974ನೇ ಇಸವಿ ಮಾರ್ಚಿ 1ನೇ ತಾರೀಖಿನಿಂದ, ಈಗ ಗೇಣಿದಾರರು ರಿಜಿಸ್ಟರ್ ಮಾಡಿಕೊಳ್ಳುವ ತಾರೀಖು ಲ್ಯಾಂಡ್ ರಿಫಾರಮ್ಸ್ ಬಿಲ್‌ನಲ್ಲಿ ಇರುವ ಹಾಗೆ ಇದರಲ್ಲಿ ಮಾರ್ಚಿ 1, 1974ನೇ ಇಸವಿ ಎಂದು ಬದಲಾವಣೆಯಾಗಿದೆ. ಇನ್ನು ವಾಸದ ಮನೆಗಳ ಬಗ್ಗೆ ಹೇಳಬೇಕು ಎಂದರೆ, ಇನಾಂದಾರರ ಜಮೀನಿನಲ್ಲಿ ಮನೆ ಇದ್ದು, ಆ ಮನೆಯಲ್ಲಿ ಗೇಣಿದಾರ ವಾಸವಾಗಿದ್ದರೆ, ಅವನನು ಆ ಮನೆಯಿಂದ ಬಿಡಂಗಡೆ ಮಾಡಬಾರದು ಎಂದು ಇದರಲ್ಲಿ ಬದಲಾವಣೆಯಾಗಿದೆ. ಇನ್ನು ಭೂಮಿಯನ್ನು ವ್ಯವಸಾಯೇತರ ಉಪಯೋಗಕ್ಕೊಸ್ಕರ ಉಪಯೋಗಿಸಿದ ಸಂದರ್ಭದಲ್ಲಿ, ಅವನ ಉದ್ದೇಶ ಸರಿಯಾದಂತ ಉದ್ದೇಶ ಇಲ್ಲದೇ, ಗೇಣಿದಾರನನ್ನು ಜಮೀನಿನಿಂದ ತಪ್ಪಿಸಬೇಕು ಎನ್ನುವ ಉದ್ದೇಶ ಇದ್ದರೆ ಅದನ್ನು ಬದಲಾವಣೆ ಮಾಡುವುದಕ್ಕೆ ಅವಕಾಶ ಇದರಲ್ಲಿ ನವೀಕರಿಸಿದೆ. ಇದರಲ್ಲಿ ಮಂಖ್ಯವಾದದ್ದು ಏನಾ ಎಂದರೆ ಅವನ ಉದ್ದೇಶ ಸರಿಯಾಗಿ ಇದ್ದು ವ್ಯವಸಾಯೇತರ ಉಪಯೋಗಕ್ಕೆಂದು ಬದಲಾವಣೆಯಾಗಿದ್ದರೆ, ಅವನ ಉದ್ದೇಶ ಯಾವುದು ಆದನ್ನು ಸಾರ್ಥಕಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರೆ ಅವನನ್ನು ಡಿಸಪ್ಲೆಸಡ್ ಟಿನೆಂಟ್ ಎಂದು ಲೆಕ್ಕಕ್ಕೆ ತೆಗೆದುಕೊಂಡು ಕಂಡಾಯದ ನೂರಷ್ಟನ್ನು ಪರಿಹಾರವಾಗಿ ಅವನಿಗೆ ಕೊಡಬೇಕಾಗುತ್ತದೆ ಎಂದು ಬದಲಾವಣೆಯಾಗಿವೆ. ಇನ್ನು ಪ್ರೀಮಿಯಮ್ ಆಗಿ ಕೊಡತಕ್ಕ ಸಂದರ್ಭದಲ್ಲಿ ಇನಾಂದಾರ ಭೂ ಕಂದಾಯದ 6ರಷ್ಟು ಕೊಡಬೇಕಾಗುತ್ತದ, ಪರಮನೆಂಟ್ಸ್ ಟಿನೆಂಟ್ಸ್ ಆಗಿದರೆ ಕಂದಾಯದ 10ರಷ್ಟು ಕೊಡಬೆಕಾಗುತ್ತದೆ, ಉಳಿದ ಗೇಣಿದಾರರು, ಮತ್ತು ಅರ್ಚಿಕ, ಪೂಜಾರಿ ಅವರು ಕಂದಾಯದ 10ರಷ್ಟು ಕೊಡಬೇಕು ಎಂದು ಹೇಳಿ ನಾವು ಬದಲಾವಣೆ ಮಾಡಿದೆವೆ ಇನ್ನು ಈ ಭೂಮಿಯನ್ನು ಇನಾಂದಾರ್ ಪರಭಾರೆ ಮಾಡಬೇಕಾದರೆ ವಿಭಾಗ ಮಾಡಿಕೊಳ ಬೇಕಾದರೆ ಅವನು ಭೂ ಕಂದಾಯದ 20ರಷ್ಟನ್ನು ಸರ್ಕಾರಕ್ಕೆ ಕೊಟ್ಟು ಡೆಪ್ಯುಟಿ ಕಮಿಷನರ್‌ರವರ ಅಪ್ಪಣೆ ತೆಗೆದುಕೊಂಡು ಮಾಡಬೇಕು ಎಂದು ಬದಲಾವಣೆ ಮಾಡಿದ್ದೇವೆ. ಮತೆ ್ತ ಇನಾಂದಾರನಿಗೆ ಕೊಡತಕ್ಕಂತಹ ಹಣದಲ್ಲಿ ಬದಲಾವಣೆಯಾಗಿದೆ. ಈಗ ನೆಟ್ ಆ್ಯನುಯಲ್ ಇನ್‌ಕಂ ಎಷ್ಟು ಬರುತ್ತದೆ ಅದರ ೧೦ರಷ್ಟು ಹಣವನ್ನಿಗೆ ಕೊಡಬೇಕು, ಅದರ ಜೊತೆಗೆ ಅಲ್ಲಿ ಗಂಧದಮರಗಳು ಇದ್ದರೆ, ಅವನು 1973ನೇ ಇಸವಿ ಸೆಪ್ಟಂಬರ್ ತಿಂಗಳು 11ನೇ ತಾರೀಖು ರಿಜಿಸ್ಟರು ಮಾಡಿಸಿರಬೇಕು. ಈಗ ಎಷ್ಟು ಮರಗಳು ಇದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟು ಕೊಂಡು ಅವನಿಗೆ ಪರಿಹಾರ ಕೊಡಬೇಕು ಎಂದು ಒಂದು ಬದಲಾವಣೆ ಮಾಡಿದ್ದೇವೆ ಅದರ ಜೊತೆಗೆ amouut towards the income from minor forest produce ದೊರಕುತ್ತದೆ. ಇಂತಿತಹ ಗ್ರಾಮಂಗಳಿಗೆ ಇಷ್ಟಿಷ್ಟು ಕೊಡಬೇಕು ಎಂದು ನಿರ್ಧರಿಸಿದೆ. ಮಂಗಾರಿ ಪುರ ಗ್ರಾಮಂಕ್ಕೆ 800 ರೂಪಾಯಿ, ಎಮ್ಮೆಹಟ್ಟಿ ಗ್ರಾಮಂಕ್ಕೆ 1,000 ರೂಪಾಯಿ, ವಿಠಲ್‌ನಗರ ಗ್ರಾಮಂಕ್ಕೆ 1,500 ರೂಪಾಯಿ ಹಣವನ್ನು ನಿರ್ದಿಷ್ಟವಾಗಿ ಕೊಡಬೇಕಾಗುತ್ತದೆ. ಇನ್ನು ಹೈಕೋರ್ಟಿಗೆ ಅಪೀಲು ಇದ್ದುದನ್ನು ತೆಗೆದುಹಾಕಿದ್ದೇವೆ. ಇಷ್ಟು ಮಾತ್ರ ಮಂಖ್ಯ ಬದಲಾವಣೆಗಳು, ಇಷ್ಟನ್ನು ಮಾನ್ಯ ಸಭೆ ಹಿಂದೆ ಯಾವ ಆನುಮಾನ ವ್ಯಕ್ತಪಡಿಸಿದರು, ಆ ಅಂಶವನ್ನೆಲ್ಲಾ ಕೂಲಂಕಷವಾಗಿ ಚರ್ಚೆ ಮಾಡಿ ಹೆಚ್ಚಾಗಿ ಗೇಣಿದಾರರಿಗೆ ಪ್ರಯೋಜನವಾಗುವ ರೀತಿಯಲ್ಲಿ ಮತ್ತು ಇನಾಂದಾರರಿಗೆ ಹಿಂದೆ ನಮ್ಮ ರಾಜ್ಯದಲ್ಲಿ ಇನಾಂ ಗ್ರಾಮಗಳನ್ನು ವಜಾ ಮಾಡಿದಾಗ ಆಕ್ಷೇಪಣೆಗಳು ಇದ್ದುದನ್ನು ದೃಷ್ಟಿಯಲ್ಲಿಟ್ಟು ಕೊಂಡು ಬದಲಾವಣೆ ಮಾಡಿದ್ದೇವೆ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಂಡೂರು ಏರಿಯಾ ಇನಾಂ ಅಬಾಲಿಷನ್ ಬಿಲ್ ಏನು ಇದೆ, ಇದು ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಫೈವಲ್ ಆಗಿದೆ. ಅದನ್ನು ಈಗ ನಮ್ಮ ಮಂಂದಿಟ್ಟಿದ್ದಾರೆ, ಇವು ಪ್ರಗತಿಪರವಾದದು ಎಂದು ಹೇಳುತ್ತೇನೆ, ಮಾನ್ಯ ರೆವಿನ್ಯೂ ಸಚಿವರು ಇಂತಹ ಪ್ರಗತಿಪರವಾದಂತ ಕಾಯಿದೆಯನ್ನು ತರುವುದಕ್ಕೆ ಹೊಣೆಯಾಗಿದ್ದಾರೆ, ಆದ್ದರಿಂದ ಅವರಿಗೆ ಅಭಿನಂದಿಸುತ್ತೇನೆ. ಇದರಲ್ಲಿ ಮತ್ತೊಂದು ವಿಷಯ ತಿಳಿಸಬೇಕು ಎಂದರೆ ಕರ್ನಾಟಕ ಲ್ಯಾಂಡ್ ರಿಫಾರಮ್ಸ್ ಆ್ಯಕ್ಟ್‌ನಲ್ಲಿ ತಂದಂಥ ಪ್ರಾಜಪನ್ ತರಲಿಲ್ಲ, ಆದರೂ ಕೆಲವು ಅಂಶಗಳಲ್ಲಿ ಪ್ರಗತಿಪರವಾದ ಅಂಶಗಳನ್ನು ತಂದಿದ್ದಾರೆ. ಇದನ್ನೂ ಕರ್ನಾಟಕ ಲ್ಯಾಂಡ್ ರಿಫಾರೆಮ್ಟ್ ಆಕ್ಟನ್ನು ನಾಂದಿಯಾಗಿಟ್ಟುಕೊಂಡು ಇದನ್ನು ತರಬೇಕು ಎಂದು ಹೇಳುತ್ತೇನೆ. ಇವೊತ್ತು ಹಳೇ ಮೆ ಸೂರಿನಲ್ಲಿ ಟಿನೆಂಟ್‌ಗೆ ಗೇಣಿದಾರ ಎಂದು ಹೇಳುತ್ತಾರೆ, ಇವೊತ್ತು ಲ್ಯಾಂಡ್ ಲಾರ್ಡ್ ಮನೆಯನ್ನು ಕಟ್ಟಿಕೊಡಲಿ ಅಥವಾ ಗೇಣಿದಾರನೇ ಮನೆಯನ್ನು ಕಟ್ಟಿಕೊಂಡಿರಲಿ, ಇವೊತ್ತು ಗೇಣಿದಾನೆನಿಗೆ ಮನೆಯನ್ನು ಕೊಡಬೇಕು

ಎಂದು ಅಧಿಕಾರ ಕೊಟ್ಟಿದ್ದಾರೆ, ಈ ಒಂದು ಹೊಸ ಕಾಯಿದೆ ತರುತ್ತಿದ್ದಾಕೆ, ಈ ಒಂದು ಕಾಯಿದೆಯನ್ನು ಆದಷ್ಟು ಬೇಗ ಜಾರಿಗೆ ತಂದು ಬೇಗ ಕೆಲಸ ಮಾಡುವ ಬಗ್ಗೆ ಮಾನ್ಯ ರೆವಿನ್ಯೂ ಸಚಿವರು ಹೆಚ್ಚು ಉತ್ಸಾಹ ವಹಿಸುತ್ತಾರೆ ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಯಾವುದೇ ಒಂದು ಕಾರಣದಿಂದ ನಾನ್ ಅಗ್ರಿಕಲ್‌ಚರ್ ಪರ್ಪಸ್‌ಗೆ ಆ ಭೂಮಿಯನ್ನು ಬಳಸೋಣ ಎಂದರೆ ಅದಕ್ಕೆ ಎಷ್ಟು ಖರ್ಚು ಮಾಡಿದರೂ ಕೂಡ ಅದನ್ನು ನಾನ್ ಅಗ್ರಿಕಲ್‌ಚರಲ್ ಪರ್ಪಸ್‌ಗೆ ಸಂಪೂರ್ಣವಾಗಿ ಉಪಯೋಗಿಸುವುದಿಲ್ಲ. ಇದರಿಂದ ಟೆನೆಂಟ್‌ಗೆ ಈ ಭೂಮಿಯ ಹಕ್ಕು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಲ್ಯಾಂಡ್ ರೂಲ್ಸ್ ಪ್ರಕಾರ ಟೆನೆಂಟ್‌ಗೆ ಆ ಭೂಮಿಯ ಹಕ್ಕು ಕೊಡಬೇಕಾದರೆ ಒಂದು ರೂಪಾಯಿ ಇದ್ದಾದನ್ನು ೧೦೦ ರೂಪಾಯಿ ಮಾಡಿದ್ದೀರಿ. ಈ ರೀತಿ ಮಾಡಿದ್ದು ಟೆನೆಂಟ್‌ನ ಒಂದು ಇಂಟರಸ್ಟ್‌ನಿಂದ ಮಾಡಿದಾತಾಗುತ್ತದೆ. ಲ್ಯಾಂಡ್ ರೂಲ್ಸ್ ಆಕ್ಟ್‌ನಲ್ಲಿ ಯಾವುದೇ ರೀತಿಯಲ್ಲಾಗಲಿ ಸೆಕ್ಷನ್ ೧೪ ಏನು ಇದೆ ಅದನ್ನು ಡಿಲೀಟ್ ಮಾಡಿ ಆ ಭೂಮಿಯನ್ನು ಟೆನೆಂಟ್‌ಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದುದರಿಂದ ಇದು ಒಂದು ಪ್ರಗತಿದಾಯಕವಾದ ಕಾಯಿದೆ ಎಂದು ಹೇಳುವುದಲ್ಲದೆ ಇದಕ್ಕೆ ನನ್ನ ಸ್ವಾಗತಾರ್ಹವೂ ಕೂಡ ಇದೆ. ಭೂಮಿ ಬಿಟ್ಟು ಹೋದರೂ ಕೂಡ ಅವನೇ ಭೂಮಿಯ ಒಡೆಯ ಎಂದ ಹಾಗೆ ಅವನಿಗೆ ಕಾಂಪನ್ಸೇಷನ್ ಕೊಟ್ಟು ಅವನಿಗೇ ಆ ಭೂಮಿಯನ್ನು ಕೊಡುವಂತೆ ಇದರಲ್ಲಿ ಒಂದು ಪ್ರಾವಿಷನ್ ಏನು ತಂದಿದ್ದೀರಿ ಇದು ಎಲ್ಲಕ್ಕಿಂತಲೂ ಪ್ರಗತಿಪರವಾದಂಥಾ ಕಾಯಿದೆ ಅಂತ ಹೇಳಬಹುದು. ಇದರಲ್ಲಿ ಯಾವುದೇ ಒಂದು ಕಾರಣದಿಂದಾಗಲಿ ಟೆನೆಂಟ್ ಹತ್ತಿರ ಇದ್ದ ಭೂಮಿಯನ್ನು ಇನಾಂದಾರರಿಗೆ ಕೊಡಬೇಕು ಎಜನ್ಸಿವ ಪ್ರಶ್ನೆ ಬಂದಾಗ ಡಿಸ್‌ಪ್ಲೇಸ್ಡ್ ಟೆನೆಂಟ್ ಬಗ್ಗೆ ಕನ್ಸಿಡರ್ ಮಾಡಿ ಲ್ಯಾಂಡ್ ರಿಫಾರಂಸ್ ಪ್ರಕಾರ ಸರ್ಕಾರದಲ್ಲಿ ಸರ್‌ಪ್ಲಸ್ ಲ್ಯಾಂಡ್ ಏನು ಬರುತ್ತದೋ ಅದರಲ್ಲಿ ಈ ಟೆನೆಂಟ್‌ಗೆ ಭೂಮಿ ಕೊಡುವುದಕ್ಕೆ ಮೊದಲನೇ ಸ್ಥಾನ ಕೊಟ್ಟಿರುವುದರಿಂದ ಇದು ಪ್ರಗತಿದಾಯಕವಾದ ಕಾಯಿದೆ ಎಂದು ಹೇಳುತ್ತೇನೆ.

ಇನ್ನು ಈ ಸೊಂಡೂರು ಇನಾಂ ಅಬಾಲಿಷನ್ ಬಿಲ್ ಏನು ಇದೆ ಇದರ ಬಗ್ಗೆ ಹೇಳಬೇಕಾದರೆ ಇಡೀ ಕರ್ನಾಟಕದಲ್ಲಿ ಈ ಲ್ಯಾಂಡ್ ರೀಫಾರಂಸ್ ಬಂದಿದ್ದರೂ ಕೂಡ, ಸುಮಾರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಕಾಲು ಶತಮಾನವಾದರೂ ಕೂಡ ಈ ಸೊಂಡೂರು ರಾಜ್ಯ ಒಂದು ಫ್ಯೂಡಲ್ ರಾಜ್ಯವಾಗಿ ನಡೆಯುತ್ತಾ ಇತ್ತು. ಇದರಿಂದ ಈ ಸೊಂಡೂರಿನ ರೈತರು ಬಹಳ ನಿರಾಸೆಯಾಗಿದ್ದರು. ಅದರ ಬಗ್ಗೆ ತಾವು ಬಗೆಹರಿಸಿದ್ದೀರಿ. ನಾವು ಯಾವಾಗ ಭೂಮಿಯನ್ನು ಉಳುತ್ತೇವೋ, ನಾವು ಯಾವಾಗ ಭೂಮಿಯನ್ನು ಸಾಗುವಳಿ ಮಾಡುತ್ತೇವೋ ಅಂತ ಅವರು ಯೋಚನೆ ಮಾಡುತ್ತಿದ್ದರು. ಅದೂ ಅಲ್ಲದೇ ಆ ರೈತರನ್ನು ಅವರು ಒಂದು ಫ್ಯೂಡಲ್ ಕ್ಲಾಸ್ ರೀತಿ ನೋಡುತ್ತಾ ಇದ್ದರು, ಈವಾಗ ಅದನ್ನು ತಾವು ಬಗೆಹರಿಸಿದ್ದೀರಿ. ಆದುದರಿಂದ ಇದು ಒಂದು ಪ್ರಗತಿಪರವಾದ ಕಾಯಿದೆ ಅಂತ ಹೇಳುವುದಲ್ಲದೆ ಇಡೀ ಕರ್ನಾಟಕಕ್ಕೆ ಇದು ಒಂದು ಮಾದರಿಯಾಗಿ ಉಳಿಯಬೇಕು. ಆದುದರಿಂದ ಇದನ್ನು ನಾನು ಸ್ವಾಗತ ಮಾಡುತ್ತೇನೆ ಅಲ್ಲದೆ ಇಡೀ ಸದನ ಈ ಬಿಲ್ಲಿಗೆ ತಮ್ಮ ಬೆಂಬಲ ಕೊಟ್ಟಿದೆ ಎಂದು ನನ್ನ ಪ್ರಾರ್ಥನೆ.

ಶ್ರೀ ಹೆಚ್. ಎನ್. ಹುಚ್ಚಮಾಸ್ತಿಗೌಡ.— ಇದಕ್ಕೆ ನಾನು ಹೆಚ್ಚು ಉತ್ತರ ಹೇಳುವ ಅವಶ್ಯಕತೆ ಇಲ್ಲ. ನಾನು ಹೇಳಿರತಕ್ಕಂಥಾದ್ದನ್ನೆಲ್ಲಾ ಶ್ರೀಮಾನ್ ವಿ. ಎನ್. ಪಾಟೀಲ್‌ರವರು ಹೇಳಿ ಇದಕ್ಕೆ ಅವರು ಬೆಂಬಲ ಕೊಟ್ಟಿದ್ದಾರೆ. ಇದು ಸರಿಯಾದ ಕಾನೂನು ಎಂದು ಹೇಳಿ ಎಲ್ಲರನ್ನೂ ಅವರು ಅಭಿನಂದಿಸಿದ್ದಾರೆ. ಆದುದರಿಂದ ನಾನೂ ಕೂಡ ಎಲ್ಲರನ್ನೂ ಅಭಿನಂದಿಸಿ ಈ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.— The question is:

"That the Karnataka (Sandur Area) Inams Abolition Bill, 1976, as reported by the Joint Select Committe be taken into consideration."

The motion was adopted

CLAUSES 2 to 12

MR. DEPUTY SPEAKER.— The question is:

"That Clauses 2 to 12, both inclusive, do stand part of the Bill."

The motion was adopted

Clauses 2 to 12, both inclusive, were added to the Bill.

CLAUSE 13

SRI N. HUTCHMASTY GOWDA.— I move the following amendment.

"That in sub-clause (1) in item (ii) for the words "on the said land", the words and brackets "on the lands (other than those in respect of which the Inamdar is registered as an occupant)" shall be substituted."

MR. DEPUTY SPEAKER.— Amendment moved.

"That in sub-clause (1) in item (ii) for the words "on the said lands", the words and brackets "on the lands (other than those in respect of which the Inamdar is registered as an occupant)" shall be substituted."

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಇದರ ಉದ್ದೇಶ ಏನೇನು ಇದೆ ಅನ್ನುವುದರ ಬಗ್ಗೆ ಇದರಲ್ಲಿ ಕೆಲವು ಸ್ಪಷ್ಟೀಕರಣ ಕೊಡುವುದಕ್ಕೋಸ್ಕರ್ ಈ ಬದಲಾವಣೆಯಾಗಿದೆ ಅಷ್ಟೆ.

MR. DEPUTY SPEAKER.— The question is:

"That in sub-clause (1) in item (ii) for the words "on the said lands", the words and brackets "on the lands (other than those in respect of which the Inamadar is registered as an occupant)" shall be substituted."

The amendment was adopted

MR. DEPUTY SPEAKER.— The question is.

"That Clause 13, as amended, do stand part of the Bill."

The motion was adopted

Clause 13, as amended, was added to the Bill.

CLAUSES 14 TO 38 AND THE SCHEDULES

MR. DEPUTY SPEAKER.— The question is.

"That Clauses 14 to 38, both inclusive, and the Schudules do stand part of the Bill."

The motion was adopted

Clauses 14 to 38, both inclusive, and the Schedules were added to the Bill.

CLAUSE 1

MR. DEPUTY SPEAKER.—The question is.

"That Clause 1, the long Title, the Preamble and the Enacting Formula do stand part of the Bill."

The motion was adopted

Clause 1, the long Title. the Preamble and the Enacting Formula were added to the Bill

Motion to Pass

SRI N. HUTCHMASTY GOWDA.— I move.

"That the Karnataka (Sandur Area) Inams Abolition Bill, 1976, as reported by the Joint Select Committe and as amended be passed."

MR. DEPUTY SPEAKER — The question is.

"That the Karnataka (Sandur Area) Inams Abolition Bill, 1976, as reported by the Joint Select Committe and as amended, be passed."

The motion was put and adopted and the Bill as amended was passed.

MR. DEPUTY SPEAKER. — The House will now rise to meet at 9-00 A.M. tomorrow.

The House adjourned at Fifty-eight Minutes past Five of the Clock to meet again at Nine of the Clock on Thursday, the 27th May, 1976

WD 4802—GPB—550—31-7-1976